ಸುವರ್ಣ ಕರ್ನಾಟಕದಲ್ಲಿ ಕೃಷಿ ಸಂಶೋಧನೆ, ಅಧ್ಯಾಪನೆ ಮತ್ತು ವಿಸ್ತರಣೆ

ಡಾ|| ಜಿ.ಕೆ. ವೀರೇಶ್, ವಿಶ್ರಾಂತ ಕುಲಪತಿ, ಯು.ಎ.ಎಸ್, ಬೆಂಗಳೂರು.

ವಿಶಾಲ ಕರ್ನಾಟಕ ಆಗಿ ಐವತ್ತು ವರುಷಗಳ ಅವಧಿಯನ್ನು ಅಂದರೆ 1956 ರಿಂದ 2006ರ ವರೆಗೆ ಸುವರ್ಣ ಕರ್ನಾಟಕವೆಂದು ಪರಿಗಣಿಸಲಾಗಿದೆ. ಈ ಅವಧಿಯನ್ನು ಸುವರ್ಣಾಕ್ಷರದಲ್ಲಿ ಬರೆದಿಡಬಹುದೆಂದು ಹೇಳಲೂ ಬಹುದು. ಈ ಅರ್ಧ ಶತಮಾನದಲ್ಲಿ ಹಲವಾರು ಕ್ಷೇತ್ರಗಳಲ್ಲಿ ಆದ ಪ್ರಗತಿ ಇದೇ ಅವಧಿಯಲ್ಲಿ ಹಿಂದೆಂದೂ ಆಗದಿರುವುದು ಚರಿತಾರ್ಹ. ಕೃಷಿಯಲ್ಲಿ ಆದ ಪ್ರಗತಿಯನ್ನು ಹಸಿರು ಕ್ರಾಂತಿಯೆಂದೇ ವರ್ಣಿಸಲಾಗಿದೆ. ತಜ್ಞರ ಅಭಿಪ್ರಾಯದಂತೆ ಇಲ್ಲಿಯವರೆಗೆ ಪ್ರಪಂಚದಲ್ಲೆಲ್ಲ ಮಾನವನ ವಿಕಾಸಕ್ಕೆ ಆದ ಕ್ರಾಂತಿಕಾರಿ ಘಟನೆಗಳಲ್ಲಿ ಮೂರು ಮುಖ್ಯವಾದವು.

ಮೊದಲನೆಯದು ಹತ್ತು ಸಾವಿರ ವರುಷಗಳ ಹಿಂದೆ ಆದ ಕೃಷಿ ಕ್ರಾಂತಿ. ಇದರ ಸಾಧನ ನೇಗಿಲು. ಅಲೆಮಾರಿ ಜೀವನ ಬಿಟ್ಟು ಒಂದೆಡೆ ನಿಂತು ಬಾಹು ಬಲದಿಂದ (Muscle power) ಕೃಷಿಯನ್ನು ಒಂದು ಜೀವನ ಶೈಲಿಯನ್ನಾಗಿ ಮಾಡಲು ನೇಗಿಲು ಸಾಧನವಾಯಿತು. ಆದರೆ ಇದರ ಮೂಲ ಯಾರಿಗೂ ತಿಳಿಯದು. ಬಲರಾಮ ನೇಗಿಲನ್ನು ಆಯುಧವಾಗಿ ಉಪಯೋಗಿಸುತಿದ್ದನೆಂದು ಪುರಾಣಗಳಿಂದ ತಿಳಿಯುತ್ತದೆ.

ಎರಡನೇಯದು ನಾನೂರು ವರುಷಗಳ ಹಿಂದೆ ಆದ ಔದ್ಯೋಗಿಕ ಕ್ರಾಂತಿ (Industrial Revolution-Machine power) ಇದರ ಸಾಧನ ಚಕ್ರ. ಇದೂ ಕೂಡ ಯಾರು ಎಲ್ಲಿ ಕಂಡುಹಿಡಿದರು ಎನ್ನುವುದಕ್ಕೆ ದಾಖಲೆಗಳಿಲ್ಲ. ಶ್ರೀ ಕೃಷ್ಣ ತನ್ನ ಗುರು ಸಾಂದಿಪನಿಯವರ ಪುತ್ರ ಪುನರ್ದತ್ತನನ್ನು ಅಪಹರಿಸಿದವರನ್ನು ಹುಡುಕುತ್ತ ಇರುವಾಗ ಗೋಮಾಂತಕ ಪರ್ವತದಲ್ಲಿ ದೊರೆಯುತ್ತಿದ್ದ ಅಮೂಲ್ಯ ಲೋಹಗಳಿಂದ ಸುದರ್ಶನ ಚಕ್ರವನ್ನು ತಯಾರಿಸಿದನೆಂದೂ ಕರವೀರ ಪುರದ ಶೃಗಾಲರಾಜನನ್ನು ಈ ಸುದರ್ಶನ ಚಕ್ರದಿಂದ ಸಂಹರಿಸಿದನೆಂದು ಹೇಳಿದ (ಕೆ.ಎಂ. ಮನ್ಷಿಯವರ ಕೃಷ್ಣಾವತಾರ).

ಮೂರನೇಯ ಕ್ರಾಂತಿ ಇತ್ತೀಚಿನದು, ಮಾಹಿತಿ ತಂತ್ರಜ್ಞಾನ. ಹಿಂದೆಂದೂ ಕಂಡರಿಯದ, ಮೇಲು ಕೀಳಿರಿಮೆಯನ್ನು ಬದಿಗೊತ್ತಿ ಬದಲಿಸಿದ ತಂತ್ರಜ್ಞಾನ. ಬಹುಶಃ ನಮ್ಮ ಇತಿಹಾಸ ಪುರುಷ ನಾರದರಿಗೊಬ್ಬರಿಗೆ ಗೊತ್ತಿದ್ದ ತಂತ್ರಜ್ಞಾನ ಶ್ರೀ ಸಾಮಾನ್ಯರಿಗೆ ದೊರೆಕುವಂತಾಯಿತು. ಇದರ ಸಾಧನ ಬುದ್ಧಿ (Mind power):

ಸಾವಿರಾರು ವರುಷಗಳಿಂದ ಹಲವಾರು ಕ್ರಾಂತಿಕಾರಿ ಘಟನೆಗಳು ನಡೆದಿದ್ದರೂ ಕೃಷಿ ಕ್ಷೇತ್ರದಲ್ಲಿ ಹತ್ತು ಸಾವಿರ ವರುಷಗಳ ಹಿಂದಿನಿಂದಲೂ ನೆಲ, ಜಲ, ಜನರ ಸಹಾಯದಿಂದ ಉತ್ತು ಬಿತ್ತಿ ಬೆಳೆಯುವ ಕೃಷಿ ಪದ್ಧತಿಯಲ್ಲಿ ಮೂಲಭೂತವಾಗಿ ಬದಲಾವಣೆ ಆಗಿಲ್ಲ. ಆದರೆ ಕೆಲವು ತಂತ್ರಜ್ಞಾನಗಳು ಹಾಗು ಪರಿಕರಗಳ ಉಪಯೋಗದಲ್ಲಿ ಬದಲಾವಣೆ ಆಗುತ್ತಾ ಬಂದಿವೆ. ಒಬ್ಬ ಸಂಶೋಧನೆಯ ವಿಮರ್ಶಕನ ಅಭಿಪ್ರಾಯದಂತೆ (Vaclav Smil: Nature 400 P.45, 1999) "ಇಪ್ಪತ್ತನೆ ಶತಮಾನದ ಬಹುಮುಖ್ಯ ಸಂಶೋಧನೆ ವಿಮಾನವಲ್ಲ, ಅಣುಶಕ್ತಿಯಲ್ಲ, ಬಾಹ್ಯಾಕಾಶಯಾನವಲ್ಲ, ಟೆಲಿವಿಷನ್ ಮತ್ತು ಕಂಪ್ಯೂಟರ್ ಕೂಡ ಅಲ್ಲ, ಅದು 1909ರಲ್ಲಿ ಕಂಡು ಹಿಡಿದ ಹಾಬರ್ ಪ್ರೋಸೆಸ್ (Haber Basch Process) ಸಂಯುಕ್ತ ಅಮೋನಿಯವನ್ನು ಮಾಡಿದ್ದು. ಇವರ ಪ್ರಕಾರ 1900ರಲ್ಲಿ ಇದ್ದ ಪ್ರಪಂಚದ ಜನಸಂಖ್ಯೆ 1.6 ಶತಕೋಟಿ, 2000ರ ವೇಳೆಗೆ ಆರು ಶತಕೋಟಿ ಮುಟ್ಟಿತು. ಇವರ ಉಳಿವಿಗೆ ಆಹಾರ ಪೂರೈಕೆ ಸಾಧ್ಯವಾದದ್ದು ಅಮೋನಿಯದಿಂದ ತಯಾರಾದ ರಸಗೊಬ್ಬರ ಬಳಕೆಯಿಂದ."

ಅಂದಿನ ಮೈಸೂರು ಅರಸು ಮನೆತನದವರ ಮುಂದಾಲೋಚನೆ, ದಿಟ್ಟ ಹೆಜ್ಜೆ ಈ ರಾಜ್ಯದ ವೈಜ್ಞಾನಿಕ ಕೃಷಿಯ ನಾನಾ ಕ್ಷೇತ್ರಗಳ ಅಭಿವೃದ್ಧಿಗೆ ಮುಖ್ಯ ಕಾರಣ. ಆಗ ಕೃಷಿ ಅಂದರೆ, ತೋಟಗಾರಿಕೆ, ಹೈನುಗಾರಿಕೆ, ಅರಣ್ಯ, ರೇಷ್ಮೆ ಕೃಷಿಗಳು ಕೂಡ ಒಳಪಟ್ಟಿದ್ದವು. ಈ ಕ್ಷೇತ್ರಗಳಲ್ಲಿ ಪರಿಣಿತ ಹಲವಾರು ವಿದೇಶಿಯ ನಿಪುಣರನ್ನು ಗುರುತಿಸಿ ಕರತರಲಾಗಿತ್ತು, ಅವರುಗಳಲ್ಲಿ ಮುಖ್ಯವಾಗಿ ಸ್ಮರಿಸುವಂತಹವರು. ಸರ್ ಮಾರ್ಕ ಕಬ್ಬನ್‌ರವರು 1836ರಲ್ಲಿ ಅಗ್ರಿಕಲ್ಚರಲ್ ಸೊಸೈಟಿಯನ್ನು ಸ್ಥಾಪಿಸಿದರು. ಬೆಂಗಳೂರು ಬಟಾನಿಕಲ್ ಗಾರ್ಡನ್ನಿನ ಸೂಪರಿಂಡೆಂಟ್ ಕ್ಯೂವಿಸ್ಟರ್ ನೂರವರು 1857ರಲ್ಲಿ ಆಸ್ಟ್ರೇಲಿಯಾದಿಂದ ಅನೇಕ ಬಗೆಯ ಗಿಡಗಳನ್ನು ತಂದು ಬೆಳಸಿದರು. ಇಟಲಿಯ ಮಿಸ್ಟರ್ ಸಗ್‌ನೊರ್‌ಡೆ ವಿಚ್ಚಿ (Mr. Signorde Vicchi) ಯವರು ಹಿಪ್ಪುನೇರಳೆಯ ತಳಿ ಮತ್ತು ಜಪಾನಿನ ರೇಷ್ಮೆ ಹುಳುಗಳನ್ನು ತಂದು ಕರ್ನಾಟಕದ ರೇಷ್ಮೆ ಕೃಷಿಗೆ ಪ್ರೋತ್ಸಹಿಸಿದರು. (ಆದರೆ ಈ ತಳಿಗಳು ಸಫಲವಾಗಲಿಲ್ಲ). ಆಗ ಕೃಷಿ ಇಲಾಖೆಯ ಒಂದು ಅಂಗವಾಗಿದ್ದ ರಾಜ್ಯ ಅರಣ್ಯ ಇಲಾಖೆಯಲ್ಲಿ ಕನಸರ್ ವೇಟರ್ ಆಗಿದ್ದ ಮಿಸ್ಟರ್ ವಾನ್ ಸಂರಿನ್ (Mr. Von Somerin)ರವರು 1869ರಲ್ಲಿ ರಾಜ್ಯ ಸಸ್ಯ ತಳಿ ಸಂಕುಲ ವಂಶಾವಳಿಯನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ಅಮೂಲ್ಯವಾದ ಪುಸ್ತಕ ಪ್ರಕಟಿಸಿದರು.

ಡಾ: ಲ್ಹೆಮನ್ (Dr. Lehman) ಕೃಷಿ ರಾಸಾಯನ ಶಾಸ್ತ್ರದ ತಜ್ಞರಾಗಿ 1899 ರಲ್ಲಿ ನೇಮಕಗೊಂಡರು. ಇವರ ಸೇವೆ ಚಿರಸ್ಮರಣೀಯ. ಜರ್ಮನ್ ದೇಶಿಯದವರಾದರೂ ಅಪೂರ್ವ ಕನ್ನಡಿಗರಾದರು. ಪ್ರಥಮವಾಗಿ ಕೃಷಿ ಸಂಶೋದನಾಲಯ ಪ್ರಾರಂಭವಾಗಿದ್ದು 1901ರಲ್ಲಿ ಇವರಿಂದ. ಇವರು ಸಂಶೋಧನೆಯ ವಾರ್ಷಿಕ ವರದಿಯನ್ನು ಕನ್ನಡದಲ್ಲೆ ಬರೆದು ಸರ್ಕಾರಕ್ಕೆ ಸಲ್ಲಿಸುತಿದ್ದರು.

ಕೃಷಿ ಇಲಾಖೆಯ ಮತ್ತೊಂದು ಮಹತ್ತರ ಮೈಲಿಗಲ್ಲು 1905ರಲ್ಲಿ ಕೆನಡಾ ದೇಶೀಯ ಡಾ: ಲೆಸ್‌ಲಿ .ಸಿ. ಕೋಲ್ಮನ್ (Dr. Leslie C. Coleman)ನೇಮಕಗೊಂಡಿದ್ದು. ಇವರು ಕೀಟ ಶಾಸ್ತ್ರ ಮತ್ತು ಸಸ್ಯ ಶಾಸ್ತ್ರ ತಜ್ಞರು. ಕೃಷಿ ಇಲಾಖೆಯ ಪ್ರಥಮ ನಿರ್ದೇಶಕರಾಗಿ 1912ರಲ್ಲಿ ನೇಮಕಗೊಂಡರು ಪ್ರಪಂಚದ ಹಲವಾರು ದೇಶಗಳಲ್ಲಿ ಪ್ರವಾಸಮಾಡಿ ರಾಜ್ಯದ ಕೃಷಿ ಪ್ರಗತಿಗೆ ಅಮೂಲ್ಯ ಕೊಡಿಗೆ ಕೊಟ್ಟರು. ಇವರು 1913ರಲ್ಲಿ ಹೆಬ್ಬಾಳದಲ್ಲಿ ಪ್ರಾರಂಭಿಸಿದ ಕೃಷಿ ಪಾಠಶಾಲೆ 1958ರತನಕ ಸಾವಿರಾರು ನುರಿತ ಸಿಬ್ಬಂದಿ ರಾಜ್ಯದ ಕೃಷಿ ಏಳಿಗೆಗೆ ಶ್ರಮಿಸಿದ್ದಾರೆ. ಮಾನವರು ಕಾಲ್ನೆಡಿಗೆಯಲ್ಲೆ ಹೋಗಲು ದುಸ್ತರವಾದ ಮಲೆನಾಡಿನಲ್ಲಿ ಶ್ರಮವಹಿಸಿ ಅಡಿಕೆ ಕೊಳೆರೋಗ ನಿಯಂತ್ರಿಸುವ ತಂತ್ರಜ್ಞಾನವನ್ನು ಪ್ರಚುರಪಡಿಸಿದರು. ಇವರ ಹಲವಾರು ಒಳ್ಳೆಯ ಕೆಲಸಗಳು ದಂತಕತೆಯಾಗಿ ಕೃಷಿ ಲೋಕದ ವಿಭೂತಿ ಪುರುಷರೆನ್ನಿಸಿಕೊಂಡರು. ಇವರು 1937ರಲ್ಲಿ ನಿವೃತ್ತಿಯಾಗಿ ತಮ್ಮ ದೇಶಕ್ಕೆ ಹಿಂದಿರುಗುವಾಗ ತಮ್ಮ ನೆಚ್ಚಿನ ಪತ್ನಿಯನ್ನು ಕಳೆದುಕೊಂಡಿದ್ದರು. ಶ್ರೀಮತಿ ಕೋಲ್ಮನ್ನರು 1928ರಲ್ಲಿ ನಿಧನರಾದರು. ಮೈಸೂರು ಜಿಲ್ಲೆಯ ಚಾಮರಾಜನಗರದಿಂದ 40 ಮೈಲಿ ದೂರದ ಅತ್ತಿಕಾನ್ ಎಸ್ಟೇಟಿನಲ್ಲಿ ಇವರ ಸಮಾದಿ ಇದೆಯಂತೆ.

ರಾಜ್ಯದ ಕೃಷಿ ಅಭಿವೃದ್ಧಿಗೆ ವೈಜ್ಞಾನಿಕ ಕೃಷಿ ಚಿಂತನೆಯ ಅಡಿಗಲ್ಲು ಮೇಲೆ ತಿಳಿಸಿರುವವರುಗಳಿಂದ ಪ್ರಾರಂಭವಾಗಿ, ಮುಂದೆ ಹೆಬ್ಬಾಳ ಕೃಷಿ ಕಾಲೇಜು (1946), ಧಾರವಾಡ ಕೃಷಿ ಕಾಲೇಜು (1947), ಬೆಂಗಳೂರು ಪಶು ವೈದ್ಯಕೀಯ ಕಾಲೇಜುಗಳು (1958) ಹೊರ ಹೊಮ್ಮಿದವು. ರಾಜ್ಯಕ್ಕೆ ಅಗತ್ಯವಿದ್ದ ಕೃಷಿ ಸಂಶೋಧಕರು, ಬೋಧಕರು, ವಿಸ್ತೀರ್ಣಾಧಿಕಾರಿಗಳನ್ನು ತಯಾರು ಮಾಡುವಲ್ಲಿ ಈ ಕಾಲೇಜುಗಳು ಸಹಾಯವಾದವು. ಏಕೀಕರಣವಾಗುವ ಸಮಯದಲ್ಲಿ (1956) ಪ್ರತಿಭಾವಂತ ಪದವೀಧರರು ಸರ್ಕಾರದ ಸಹಾಯದಿಂದ ಹೊರದೇಶದಲ್ಲಿ ಮತ್ತು ಹೊರರಾಜ್ಯದಿಂದ ಉನ್ನತ ಶಿಕ್ಷಣಪಡೆದು ಹಲವಾರು ವಿಷಯಗಳಲ್ಲಿ ಪರಿಣತೆ ಪಡೆದು ಬಂದಿದ್ದರು.

ಕರ್ನಾಟಕದಲ್ಲಿ ಒಂದು ವ್ಯವಸ್ಥಿತ ಕೃಷಿ ಶಿಕ್ಷಣ, ಸಂಶೋಧನೆ, ವಿಸ್ತರಣೆ ಪ್ರಾರಂಭವಾದದ್ದು 1965ರ ನಂತರವೆಂದೇ ಹೇಳಬಹುದು. ಮೊದಲ ಕೃಷಿ ವಿಶ್ವವಿದ್ಯಾನಿಲಯ 1965ರಲ್ಲಿ ಪ್ರಾರಂಭವಾದ ನಂತರವೇ ಆದ್ಯತೆ ಮೇರೆಗೆ ಕರ್ನಾಟಕದ ಹತ್ತೂ ವಲಯಗಳಲ್ಲಿ ಹರಡಿದ್ದ 48 ಸಂಶೋಧನಾ ಕೇಂದ್ರಗಳು ಆಯಾ ಪ್ರದೇಶಕ್ಕೆ ಅನುಗುಣವಾದ ಸಂಶೋಧನೆಯನ್ನು ಪ್ರಾರಂಭಿಸಿದವು. ಕೃಷಿ ಶಿಕ್ಷಣವೂ ಕೂಡ ಅಮೆರಿಕನ್ ಲ್ಯಾಂಡ್ ಗ್ರಾಂಟ್ ಕಾಲೇಜು ಮಾದರಿಯ ತ್ರೈಮಾಸಿಕ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲಾಯಿತು. ಕೃಷಿ ವಿಸ್ತರಣೆ, ವಿಷಯ ತಜ್ಞರನ್ನೊಳಗೊಂಡ ಘಟಕಗಳು ಶೀಘ್ರವೇ ರೈತರ ಮನ

ಪ್ರೇಬ್ಬ

ಸೆಳೆದವು. ಮುಂದಿನ ಪುಟಗಳಲ್ಲಿ ಕೃಷಿ ವಿಶ್ವ ವಿದ್ಯಾನಿಲಯಗಳು ಸುವರ್ಣ ಕರ್ನಾಟಕದಲ್ಲಿ ಮಾಡಿದ ಸಾಧನೆಯ ಕಿರು ಪರಿಚಯುವನ್ನು ಕೊಡಲಾಗಿದೆ.

ಕೃಷಿ ವಿಶ್ವ ವಿದ್ಯಾಲಯಗಳ ವೈಶಿಷ್ಟವೇನೆಂದರೆ ದೇಶದ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಇಲ್ಲದ ಮೂರು ಮುಖ್ಯ ಕಾರ್ಯ ವ್ಯಾಪ್ತಿ ಅಂದರೆ, ಕೃಷಿಯಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಇವುಗಳ ಗುರಿ. ಯಾವುದೇ ವಸ್ತು ಸ್ಥಿರವಾಗಿ ನಿಲ್ಲಬೇಕಾದರೆ ಕನಿಷ್ಠ ಮೂರು ಕಾಲುಗಳಿರಬೇಕು ಹಾಗು ಅವೆಲ್ಲ ಸಮಾನಾಂತರದಲ್ಲಿರಬೇಕು ಯಾವುದಾದರು ಒಂದು ಏರು ಪೇರಾದರೂ ಸ್ಥಿರತೆಯನ್ನು ಕಾಪಾಡಲಾರದು. ಅದ್ದರಿಂದ ಈ ತ್ರಿಕೋನವಾದ ಮೂರೂ ಭಾಗಗಳನ್ನು ಸಮಾನಂತರವಾಗಿ ಪರಿಗಣಿಸಲಾಗಿದೆ. ಇಂದು ಸುವರ್ಣ ಕರ್ನಾಟಕದಲ್ಲಿ ಎರಡು ಕೃಷಿ ವಿಶ್ವ ವಿದ್ಯಾನಿಲಯಗಳು ಮತ್ತು ಒಂದು ಪಶುವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನ ವಿಶ್ವ ವಿದ್ಯಾನಿಲಯಗಳು ಅಸ್ತಿತ್ವದಲ್ಲಿವೆ. ಇವುಗಳ ಉಗಮ ಮೂಲ ಉದ್ದೇಶ, ಕಾರ್ಯ ವ್ಯಾಪ್ತಿ ಮತ್ತು ಕೊಡಿಗೆಯ ಬಗ್ಗೆ ಸ್ಥೂಲವಾಗಿ ವಿವರಿಸಲಾಗಿದೆ.

ಕರ್ನಾಟಕದ ಕೃಷಿ ವಿಶ್ವ ವಿದ್ಯಾನಿಲಯಗಳ ಆಡಳಿತ ವೈಖರಿಯಲ್ಲಿ ಹಾಗು ಅವುಗಳ ಪಾತ್ರ, ಇತರೆ ವಿಶ್ವವಿದ್ಯಾನಿಲಯಗಳಿಂದ ಭಿನ್ನವಾಗಿರುವುದರಿಂದ ಇವುಗಳ ಅಧಿನಿಯಮ ಮತ್ತು ಪರಿನಿಯಮಗಳನ್ನು ಲಘುವಾಗಿ ವಿವರಿಸಲಾಗಿದೆ.

ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ (ಅಧಿ ನಿಯಮ ಸಂ. 22, 1963: ಮೈಸೂರು ರಾಜ್ಯಪತ್ರ ಜೂನ್ 6ನೇ ತಾರೀಖು 1963):

ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ ಸ್ಥಾಪಿತವಾದಾಗ ಆಗ ಇದ್ದ ಎರಡು ಕೃಷಿ ಕಾಲೇಜು (ಬೆಂ. & ಧಾ) ಮತ್ತು ಒಂದು ಪಶು ವೈದ್ಯಕೀಯ ಕಾಲೇಜು ಬೆಂಗಳೂರು ಒಳಗೊಂಡಂತೆ ಕರ್ನಾಟಕದಾದ್ಯಂತ 48 ಕೃಷಿ ಮತ್ತು ತೋಟಗಾರಿಕೆ ಫಾರಂಗಳು ಇದರ ಕಾರ್ಯವ್ಯಾಪ್ತಿಗೆ ಒಳಪಟ್ಟವು.

ಕೃಷಿ ವಿಶ್ವ ವಿದ್ಯಾನಿಲಯದ ಅಧಿನಿಯಮ, ಪರಿನಿಯಮ ಮತ್ತು ನಿಯಮಗಳುಳ್ಳ ಹೊತ್ತಿಗೆಯಲ್ಲಿ 8 ಅಧ್ಯಾಯಗಳಿವೆ.

ಅಧ್ಯಾಯ 1:– ಉದ್ದೇಶ: ಬೆಂಗಳೂರು ಕೃ.ವಿ.ವಿ (ಯು.ಎ.ಎಸ್) ಮುಖ್ಯಗುರಿ ಕೃಷಿ ಹೈನುಗಾರಿಕೆ ಮತ್ತು ಇದಕ್ಕೆ ಸಂಬಂದಪಟ್ಟ ಎಲ್ಲಾ ಕ್ಷೇತ್ರಗಳ ಅಧ್ಯಾಪನ, ಸಂಶೋಧನೆ ಮತ್ತು ವಿಸ್ತರಣೆ.

ಅಧ್ಯಾಯ 2:- ಆಡಳಿತ:

1. **ಆಡಳಿತ ಮಂಡಳಿ** (Board of Regents):

   ಆಡಳಿತ ಮಂಡಳಿಯ ಸದಸ್ಯರು (ಮೂರು ವರ್ಷದ ಅವಧಿ):

   ಕುಲಪತಿ (ಅಧ್ಯಕ್ಷರು), ನಾಲ್ಕು ಸರ್ಕಾರದ ಕಾರ್ಯದರ್ಶಿಗಳು (ಹಣಕಾಸು, ವ್ಯವಸಾಯ, ಪಶು ಸಂಗೋಪನೆ ಹಾಗು ಶಿಕ್ಷಣ) ಕುಲಾಧಿಪತಿಯಿಂದ ನಾಮ ನೀರ್ದೇಶಿತರಾದ ಇಬ್ಬರು ರೈತ ಪ್ರತಿನಿಧಿಗಳು ಹಾಗು ಒಬ್ಬರು ಮಹಿಳಾ ಸಾಮಾಜ ಕಾರ್ಯಕರ್ತೆ, ಒಬ್ಬರು ರಿಜಿಸ್ಟರ್ಡ ಗ್ರಾಜುಯೇಟ್ (ಹಿರಿಯ ವಿದ್ಯಾರ್ಥಿ ಸಂಘದಿಂದ ಶಿಫಾರಸ್ಸು ಮಾಡಿದ್ದು), ಇಬ್ಬರು ಕೃಷಿ ತಜ್ಞರು.

2. **ಶೈಕ್ಷಣಿಕ ಮಂಡಳಿ** (Academic Council):

   ಕುಲಪತಿ (ಅಧ್ಯಕ್ಷರು), ಡೀನ್, ಡೈರಕ್ಟರ್ಸ್ ಮತ್ತು ವಿಭಾಗೀಯ ಮುಖ್ಯಸ್ಥರು.

3. **ವಿದ್ಯಾ ವಿಷಯಕ ಪರಿಷತ್** (Board of Studies):

   ವ್ಯವಸಾಯ, ಪಶುವೈದ್ಯಕೀಯ ಮತ್ತು ಮೂಲ ವಿಜ್ಞಾನ.

ಅಧ್ಯಾಯ 3:- ವಿಶ್ವ ವಿದ್ಯಾನಿಲಯದ ಅಧಿಕಾರಿಗಳು: ಕುಲಾಧಿಪತಿ, ಸಹ ಕುಲಾಧಿಪತಿ ಕುಲಪತಿ, ಡೀನ್‌ಗಳು, ಲೆಕ್ಕ ಪತ್ರ ನಿಯಂತ್ರಕರು, ಗ್ರಂಥಪಾಲಕರು, ನಿರ್ದೇಶಕರು (ಶಿಕ್ಷಣ, ಸಂಶೋಧನೆ, ವಿಸ್ತರಣೆ), ವಿಭಾಗ ಮುಖ್ಯಸ್ಥರು ಮತ್ತು ಇತರೆ ಅಧಿಕಾರಿಗಳೆಂದು ಪರಿನಿಯಮಗಳಿಂದ ಘೋಷಿಸಿದವರು.

ಅಧ್ಯಾಯ 4:- ವಿಶ್ವ ವಿದ್ಯಾನಿಲಯದ ಪ್ರಾಧಿಕಾರಗಳು:

1. ಆಡಳಿತ ಮಂಡಳಿ 2. ಶೈಕ್ಷಣಿಕ ಮಂಡಳಿ 3. ಸಂಶೋಧನ ಪರಿಷತ್
4. ವಿಸ್ತರಣಾ ಪರಿಷತ್ 5. ಹಣಕಾಸು ಸಮಿತಿ

ಅಧ್ಯಾಯ 5:- ವಿಶ್ವ ವಿದ್ಯಾನಿಲಯದ ನಿಧಿಗಳು (University Funds):

ಅಧ್ಯಾಯ 6:- ಪರಿನಿಯಮಗಳು ಮತ್ತು ನಿಯಮಗಳು (Statutes & Regulation)

ಅಧ್ಯಾಯ 7:– ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ .

ಅಧ್ಯಾಯ 8:– ಇತರೆ

ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯ (1986ರ ಕರ್ನಾಟಕ ಅಧಿನಿಯಮ 14–ಕರ್ನಾಟಕ ರಾಜ್ಯಪತ್ರ ಮೇ 2, 1986):

ಇದರ ಅಧಿನಿಯಮ ಪರಿನಿಯಮ ಮತ್ತು ನಿಯಮಗಳು ಬೆಂಗಳೂರು ಕೃ.ವಿ.ವಿದಲ್ಲಿ ಇರುವಂತೆಯೇ ಇವೆ. ಆದರೆ ಈ ಅಧಿನಿಯಮದಲ್ಲಿ ಒಂದು ಕೊ–ಆರ್ಡಿನೆಟೆಡ್ ಕಮೀಟಿಯನ್ನು ರಚಿಸಲು ಅವಕಾಶ ಮಾಡಲಾಗಿದೆ. ಅದರ ಪ್ರಕಾರ ಎರಡೂ ವಿಶ್ವ ವಿದ್ಯಾನಿಲಯಗಳ ಕುಲಪತಿಗಳು, ರಿಜಿಸ್ಟ್ರಾರ್, ಡೀನ್ ಮತ್ತು ಸಂಶೋಧನೆ, ವಿಸ್ತರಣೆ ಡೈರಕ್ಟರುಗಳು ಈ ಸಮಿತಿಯಲ್ಲಿ ಇರುತ್ತಾರೆ.

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಿಗಳ ವಿಶ್ವ ವಿದ್ಯಾನಿಲಯ (2004, ಪೆಬ್ರವರಿ 21ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿ ಪಡೆದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪೆಬ್ರವರಿ 23ರಂದು ಪ್ರಕಟವಾಗಿದೆ):

ಈ ವಿಶ್ವ ವಿದ್ಯಾನಿಲಯದ ಕೇಂದ್ರ ಕಛೇರಿ ಬೀದರ್‌ನಲ್ಲಿದೆ. ಇದರ ಕಾರ್ಯವ್ಯಾಪ್ತಿ ಕರ್ನಾಟಕದಾದ್ಯಂತ. ಇದೂ ಕೂಡಾ, ಸಣ್ಣ ಪುಟ್ಟ ಬದಲಾವಣೆಗಳನ್ನು ಹೊರತು ಪಡಿಸಿ, ರಾಜ್ಯದ ಇತರೆ ಕೃಷಿ ವಿಶ್ವ ವಿದ್ಯಾನಿಲಯಗಳು ಅಳವಡಿಸಿಕೊಂಡಿರುವ ಅಧಿನಿಯಮ, ಪರಿನಿಯಮ, ಮತ್ತು ನಿಯಮಗಳ ಅನುಸಾರವೆ ಇದೆ.

ಈ ವಿಶ್ವ ವಿದ್ಯಾನಿಲಯಕ್ಕೆ ಸಂಬಂಧಪಟ್ಟ ಎಲ್ಲಾ ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಬೆಂಗಳೂರು ಮತ್ತು ಧಾರವಾಡ ಕೃ.ವಿ.ವಿಗಳಿಂದ ವರ್ಗಾಹಿಸಲ್ಪಡುತ್ತವೆ. ಅದರಂತೆ ಬೆಂ. ಕೃ.ವಿ.ವಿ. ಹೆಬ್ಬಾಳ ಪಶುವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಹೈನುಗಾರಿಕೆ ವಿಜ್ಞಾನ ಕಾಲೇಜು ಮತ್ತು ಹೆಬ್ಬಾಳ ಮುಖ್ಯ ಸಂಶೋಧನಾ ಕೇಂದ್ರ, ಮಂಗಳೂರು ಮೀನುಗಾರಿಕೆ ಕಾಲೇಜು, ತಿಪಟೂರು, ಜಡ್.ಎ.ಆರ್.ಎಸ್. ಕೋನ್ನೆಹಳ್ಳಿ, ನಾಗಮಂಗಲ ಎ.ಆರ್.ಎಸ್. ಯಲಹಂಕ ಗ್ರಾಮೀಣಾ ಪಶು ವೈದ್ಯಕೀಯ ಆಸ್ಪತ್ರೆ, ಮೀನುಗಾರಿಕೆ ಸಂಶೋಧನಾ ಕೇಂದ್ರ ಹೆಸರಘಟ್ಟ ಮತ್ತು ಕಂಕನಾಡಿ, ಕುರಿ ತಳಿ ಫಾರ್ಮ ಬಂದೂರು ಮಳ್ಳವಳ್ಳಿ.

ಧಾ.ಕೃ.ವಿ.ವಿ ವ್ಯಾಪ್ತಿಯಲ್ಲಿರುವ ಪಶು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಬೀದರ್, ಕೃ.ಸಂ.ಕೇಂದ್ರ ಹಳ್ಳಿ ಖೇಡ, ಬೀದರ್, ಕೃ.ಸಂ.ಕೇಂದ್ರ ಅರಭಾವಿ, ಮೀ. ಸಂ. ಕೇಂದ್ರ ಅಂಕೋಲಾ, ಜಾನುವಾರು ಕೇಂದ್ರ ಕುರಿಕುಪ್ಪೆ ಬಳ್ಳಾರಿ, ಮೀನು ಮರಿ ಉತ್ಪಾದನಾ ಫಾರ್ಮ ಶಿವಪುರ ಮತ್ತು ಮುನಿರಾಬಾದ್ ಕೊಪ್ಪಳ ಜಿಲ್ಲೆ.

ಇವಲ್ಲದೆ ಪಶು ಆರೋಗ್ಯ ಮತ್ತು ಪಶು ವೈದ್ಯ ಜೀವಶಾಸ್ತ್ರಗಳ ಸಂಸ್ಥೆ ಬೆಂಗಳೂರು, ಕ.ಸ. ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯ ಹೆಸರಘಟ್ಟ ಜಾನುವಾರು ಫಾರ್ಮಗಳೂ ಕೂಡ ಈ ಕೃ.ವಿ.ವಿ ವ್ಯಾಪ್ತಿಗೆ ಬರುತ್ತದೆ.

ಕರ್ನಾಟಕದ ಕೃಷಿ ವಿಶ್ವ ವಿದ್ಯಾನಿಲಯಗಳ ಕೊಡಿಗೆ:

ಶಿಕ್ಷಣ ಕ್ಷೇತ್ರ:

ಈಗಾಗಲೆ ತಿಳಿಸಿರುವಂತೆ ಏಕೀಕರ್ನಾಟಕದ ಮುಂಚೆ (1956) ಕರ್ನಾಟಕದಲ್ಲಿ ಎರಡು ಕೃಷಿ ಕಾಲೇಜುಗಳು ಮಾತ್ರ ಇದ್ದವು. ಪಶು ವೈದ್ಯಕೀಯ ಕಾಲೇಜು 1958ರಲ್ಲಿ ಪ್ರಾರಂಭವಾಯಿತು. ಕೃ.ವಿ.ವಿದ್ಯಾನಿಲಯ (1964) ಪ್ರಾರಂಭದ ನಂತರ, ಬೆಂಗಳೂರು ಮೂಲ ವಿಜ್ಞಾನ ಕಾಲೇಜು (1966) ಮಂಗಳೂರು ಮೀನುಗಾರಿಕೆ ಕಾಲೇಜು (1969), ರಾಯಚೂರು ಅಗ್ರಿಕಲ್ಚರ್ ಇಂಜಿನಿಯರಿಂಗ್ ಇನಿಸ್ಟಿಟ್ಯೂಟ್ (1969), ಧಾರವಾಡ ಹೋಂ ಸೈನ್ಸ್ ಕಾಲೇಜು (1974) ಮತ್ತು ಬೆಂಗಳೂರು ಡೈರಿ ಸೈನ್ಸ್ ಕಾಲೇಜು (1980) ಸೇರ್ಪಡೆಯಾದವು.

ದೇಶದಲ್ಲೇ ಪ್ರಪ್ರಥಮವಾಗಿ ಪ್ರಾರಂಭವಾದ ಮಂಗಳೂರು ಮೀನುಗಾರಿಕೆ ಕಾಲೇಜು ಕೃಷಿ ವಿಶ್ವ ವಿದ್ಯಾನಿಲಯಕ್ಕೆ ಕೀರಿಟಪ್ರಾಯವಾಯಿತು. ಇಲ್ಲಿ ನುರಿತ ವಿದ್ಯಾರ್ಥಿಗಳು ದೇಶದ ಹಲವಾರು ಕಡೆ ಮೀನುಗಾರಿಕೆ ಕಾಲೇಜು ತೆರೆಯಲು ಪೂರಕವಾದರು. ಮಂಗಳೂರು ಮೀನುಗಾರಿಕೆ ಕಾಲೇಜು ಪ್ರಾರಂಭದಿಂದ ಇಲ್ಲಿಯವರೆಗೆ ಸುಮಾರು 800 ಬಿ.ಎಫ್.ಎಸ್.ಸಿ. ಗ್ರಾಜುಯೇಟ್ಸ್, 400 ಎಂ.ಎಫ್.ಎಸ್.ಸಿ. ಹಾಗು ಪಿ.ಹೆಚ್.ಡಿ ವಿದ್ಯಾರ್ಥಿಗಳು ಹೊರಬಂದಿದ್ದಾರೆ. ಈ ಕಾಲೇಜಿಗೆ ಕೃಷಿ ವಿಶ್ವ ವಿದ್ಯಾನಿಲಯದ ಮತ್ತ್ಯಾವ ಕಾಲೇಜಿಗೆ ದೊರೆಯದ ಹೊರದೇಶದ ಆರ್ಥಿಕ ನೆರವು, ಸಿಬ್ಬಂದಿಗಳಿಗೆ ಹೊರದೇಶಗಳಲ್ಲಿ ಉನ್ನತ ಶಿಕ್ಷಣ ದೊರೆತಿದೆ. ಅಂತರರಾಷ್ಟ್ರ ಮಟ್ಟದಲ್ಲಿ ಹೆಸರುಗಳಿಸಿದೆ.

ಡೈರಿ ಸೈನ್ಸ್ ಕಾಲೇಜಿನ ಕಾರ್ಯ ನಿರ್ವಾಹಕ ಗುರಿ ರಾಜ್ಯದಲ್ಲಿ ಡೈರಿ ಡೆವಲಪ್ ಮೆಂಟ್‌ಗೆ ಬೇಕಿರುವ ತಾಂತ್ರಿಕ ಸಿಬ್ಬಂದಿಯನ್ನು ತಯಾರು ಮಾಡುವುದು. ಎನ್.ಡಿ.ಡಿ.ಬಿ. ಮತ್ತು ಐ.ಸಿ.ಎ.ಆರ್. ಕಮಿಟಿಗಳ ಸಮೀಕ್ಷೆಗಳ ಪ್ರಕಾರ ದೇಶದಲ್ಲಿರುವ ಅತ್ಯುತ್ತಮ ಮೂರು ಡೈರಿ ಕಾಲೇಜುಗಳಲ್ಲಿ

ಬೆಂಗಳೂರಿನ ಬಿ.ಟೆಕ್. (ಡಿ.ಟೆಕ್) ಕಾಲೇಜು ಒಂದೆಂದು ಪರಿಗಣಿಸಲಾಗಿದೆ. ಕೃಷಿ ವಿಶ್ವ ವಿದ್ಯಾನಿಲಯದ ಕಾಲೇಜುಗಳಲ್ಲಿ ಇದೊಂದಕ್ಕೆ ಮಾತ್ರ ಹೊರಗಿನವರಿಂದ ವಿದ್ಯಾರ್ಥಿಗಳನ್ನು ಪರಿಕ್ಷೀಸುವ (External Examination) ಹಕ್ಕನ್ನು ಹೊಂದಿದೆ.

ಸಾವಿರದ ಒಂಬೈನೂರ ಎಂಬತ್ತಾರರನಂತರ ಕರ್ನಾಟಕದ ಎರಡು ಕೃ.ವಿ.ವಿಗಳು, ಕೃಷಿ ಜ್ಞಾನ, ತಂತ್ರಜ್ಞಾನವನ್ನು ಗ್ರಾಮೀಣದತ್ತ ಕೊಂಡೊಯ್ಯುವ ದೃಷ್ಠಿಯಿಂದ ಅಲ್ಲಲ್ಲಿ ಹಲವು ನೂತನ ಕಾಲೇಜುಗಳನ್ನು ಪ್ರಾರಂಭಿಸಿವೆ. ಬೆಂಗಳೂರು ಕೃ.ವಿ.ವಿ ಶಿವಮೊಗ್ಗ (1990), ಮಂಡ್ಯ (1991), ಹಾಸನ (1996) ಗಳಲ್ಲಿ ಕೃಷಿ ಕಾಲೇಜುಗಳನ್ನು, ಮೂಡಿಗೆರೆ ಯಲ್ಲಿ(1991) ತೋಟಗಾರಿಕೆ ಕಾಲೇಜು, ಚಿಂತಾಮಣಿಯಲ್ಲಿ (1995) ರೇಷ್ಮೆ ಕೃಷಿ ಕಾಲೇಜು, ಪೊನ್ನಂಪೇಟೆಯಲ್ಲಿ (1995) ಅರಣ್ಯ ಕಾಲೇಜುಗಳನ್ನು ಪ್ರಾರಂಭಿಸಲಾಯಿತು. ರೇಷ್ಮೆ ಕೃಷಿ ಕಾಲೇಜು ದೇಶದಲ್ಲೇ ಮೊಟ್ಟ ಮೊದಲನೇಯದು ಮತ್ತೆಲ್ಲೂ ರೇಷ್ಮೆ ಕೃಷಿ ಕಾಲೇಜಿಲ್ಲ.

ಧಾರವಾಡ ಕೃ.ವಿ.ವಿದ್ಯಾನಿಲಯದವತಿಯಿಂದ 1986ರಿಂದ ಈಚೇಗೆ ತೆರೆದಿರುವ ಕಾಲೇಜುಗಳೆಂದರೆ, ಸಿರಸಿ ಅರಣ್ಯ ಕಾಲೇಜು, ಅರಭಾವಿ ತೋಟಗಾರಿಕೆ ಕಾಲೇಜು, ಬೀದರ್ ಪಶು ವೈದ್ಯಕೀಯ ಕಾಲೇಜು, ರಾಯಚೂರು ಕೃಷಿ ಇಂಜನಿಯರಿಂಗ್ ಕಾಲೇಜು ಹಾಗು ಮೂರು ಕೃಷಿ ಕಾಲೇಜುಗಳು (ರಾಯಚೂರು, ಬಿಜಾಪುರ ಮತ್ತು ಭೀಮರಾಯನಗುಡಿ).

ಕೃಷಿ ಮಾರುಕಟ್ಟೆ ಮತ್ತು ಕೋ-ಅಫ್‌ರೇಷನ್ ಡಿಗ್ರಿ ಕೋರ್ಸನ್ನು ಎರಡೂ ಕೃ.ವಿ.ವಿದ್ಯಾನಿಲಯದ ಕೃಷಿ ಕಾಲೇಜುಗಳಲ್ಲಿಯೇ ಕೊಡಲಾಗುತ್ತಿದೆ.

ಇತ್ತೀಚೆಗೆ ಮತ್ತೊಂದು, ಕೃ.ವಿ. ವಿದ್ಯಾನಿಲಯವನ್ನು, ರಾಯಚೂರಿನಲ್ಲಿ ಹಾಗೂ ಬಾಗಲಕೋಟೆಯಲ್ಲಿ ತೆರೆಯಲು ಸರ್ಕಾರ ತೀರ್ಮಾನಿಸಿದೆ.

ಕರ್ನಾಟಕವು ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳ ಸಂಖ್ಯೆಯಲ್ಲಿ ಹೆಸರುವಾಸಿಯಾಗಿರುವಂತೆಯೇ ಕೃಷಿ ಮತ್ತು ಕೃಷಿ ಸಂಬಂಧಪಟ್ಟ ಕಾಲೇಜುಗಳ ಸಂಖ್ಯೆಯಲ್ಲಿಯೂ ಮುಂಚೂಣಿಯಲ್ಲಿದೆ. ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಎಲ್ಲವನ್ನು ಒಳಗೊಂಡ ಸುಮಾರು 20 ಕಾಲೇಜುಗಳು ಇಲ್ಲಿರುವುದು ದೇಶದ ಮತ್ತ್ಯಾವ ಒಂದು ರಾಜ್ಯದಲ್ಲಿ ಇರಲಾರವು.

ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯ 47 ವಿಷಯಗಳಲ್ಲಿ ಎಂ.ಎಸ್ಸಿ ಮತ್ತು 34 ವಿಷಯಗಳಲ್ಲಿ ಪಿ.ಹೆಚ್.ಡಿ ಸ್ನಾತಕೋತ್ತರ ಪದವಿಗೆ ತೆರೆದಿದೆ. ಹೀಗೆಯೇ ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯ 33 ವಿಷಯಗಳಲ್ಲಿ ಎಂ.ಎಸ್ಸಿ ಮತ್ತು 19 ವಿಷಯಗಳಲ್ಲಿ ಪಿ.ಹೆಚ್.ಡಿ ಪದವಿಗೆ ತೆರೆದಿದೆ. ಇಲ್ಲಿಯತನಕ

ಬೆಂಗಳೂರು ಕೃ.ವಿ.ವಿದ್ಯಾನಿಯದಿಂದ ಹೊರಬಂದ ವಿದ್ಯಾರ್ಥಿಗಳ ಸಂಖ್ಯೆ 15,013 ಪದವಿ, 5,989 ಎಂ.ಎಸ್ಸಿ, ಮತ್ತು 1,067 ಪಿ.ಹೆಚ್.ಡಿಗಳು. ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯದಿಂದ 4,599 ಪದವೀಧರರು, 2,433 ಎಂ.ಎಸ್ಸಿ ಮತ್ತು 345 ಪಿ.ಹೆಚ್.ಡಿಗಳು ಪರಿಣತಿ ಪಡೆದಿದ್ದಾರೆ.

ಇವಲ್ಲದೆ ಪದವಿ ಅಲ್ಲದ ಸ್ನಾತಕೋತ್ತರ ಡಿಪ್ಲೊಮಗಳಾದ, ಇಂಟೆನ್‌ಸೀವ್ ಕ್ರಾಪ್ ಪ್ರೊಡಕ್ಷನ್, ಸೆರಿಕಲ್ಚರ್, ಪೌಲ್ಟ್ರಿ ಹಾಗು ಅಣಬೆ ಬೇಸಾಯ, ಜೇನುಸಾಕಣೆ ಮುಂತಾದ ನಿಯತಕಾಲಿಕ ತರಬೇತಿಗಳನ್ನು ಕೊಡಲಾಗುವುದು. ಕೃಷಿ ವಿಶ್ವ ವಿದ್ಯಾನಿಯಲದ ಮತ್ತೊಂದು ಮಹತ್ವದ ವಿಷಯವೇನೆಂದರೆ ಮೊದಲ ಹಂತದ ಪದವಿ ಪಡೆಯುವ ಮುನ್ನ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ 6 ತಿಂಗಳು ಹಳ್ಳಿಗಳಲ್ಲಿ ರೈತರೊಡನೆ ಬೆರೆತು ಅವರಿಂದ ಕಲಿತು ಮತ್ತು ಇವರು ಕಲಿತದ್ದನ್ನು ಅವರಿಗೆ ತಿಳಿಸುವ ವಿಧಾನ. ಈ ಬಗೆಯ ಶಿಕ್ಷಣ ರಾಜ್ಯದ ಮತ್ತ್ಯಾವ ವಿಶ್ವ ವಿದ್ಯಾನಿಲಯದಲ್ಲಿ ಇಲ್ಲ.

ಸಂಶೋಧನೆಯ ಕೊಡುಗೆ:

ತಳಿ ಅಭಿವೃದ್ಧಿ ಮತ್ತು ಕೃಷಿ ತಂತ್ರಜ್ಞಾನ ಕೃಷಿ ವಿಶ್ವ ವಿದ್ಯಾನಿಲಯಗಳ ಸಂಶೋಧನೆಯ ಮುಖ್ಯ ಗುರಿ. ರಾಜ್ಯದ ಮುಖ್ಯ ಆಹಾರ ಬೆಳೆಗಳಾದ ರಾಗಿ, ಜೋಳ, ಭತ್ತಗಳಲ್ಲಿ ರೈತರಿಗೆ ಲಾಭತರುವ ಮತ್ತು ರಾಜ್ಯದ ಆಹಾರ ಬೇಡಿಕೆ ಪೂರೈಸುವ ತಳಿಗಳು ಬಿಡುಗಡೆಯಾಗಿವೆ. ರಾಗಿಯಲ್ಲಿ ಇಂಢಾಫ್ ತಳಿ ಮತ್ತು ಜಿ.ಪಿ.ಯು, ಭತ್ತದಲ್ಲಿ ಐ.ಇ.ಟಿ, ಐ.ಆರ್ ಮತ್ತು ದೇಶದ ಮೊಟ್ಟ ಮೊದಲ ಹೈಬ್ರಿಡ್ ತಳಿ ಕೆ.ಆರ್.ಹೆಚ್ 1, 2 : ಮುಸುಕಿನ ಜೋಳದಲ್ಲಿ ಗಂಗಾ, ಸೋಯ ಅವರೆಯಲ್ಲಿ ಕೆ.ಬಿ.79, ನೆಲಗಡಲೆಯಲ್ಲಿ ಕೆ.134, ಸೂರ್ಯಕಾಂತಿಯಲ್ಲಿ ಕೆ.ಬಿ.ಎಸ್.ಹೆಚ್ 41, 42: ಘೇರು ಬೀಜದಲ್ಲಿ ಉಲ್ಲಾಳ 3, 4, ಮಾವಿನಲ್ಲಿ ಮಲ್ಲಿಕಾ ಎಂ.ಎ.1, ಎಲಕ್ಕಿಯಲ್ಲಿ ಮೂಡಿಗೆರೆ 2 ಹೀಗೆ 19 ಬೆಳೆಗಳಲ್ಲಿ 47 ತಳಿಗಳನ್ನು ಬೆಂಗಳೂರು ಕೃ.ವಿ.ವಿಯು ಬಿಡುಗಡೆ ಮಾಡಿದೆ.

ಧಾರವಾಡ ಕೃ.ವಿ.ವಿ. ಸುಮಾರು 119 ತಳಿಗಳನ್ನು ಬಿಡುಗಡೆ ಮಾಡಿದೆ. ಅವುಗಳಲ್ಲಿ ಆಹಾರ ಧಾನ್ಯ 34, ಎಣ್ಣೆ ಕಾಳು 16, ದ್ವಿದಳ ಧಾನ್ಯ 19, ವಾಣಿಜ್ಯ ಬೆಳೆ 20, ಮೇವು 13 ಮತ್ತು ತೋಟಗಾರಿಕೆ ಬೆಳೆ 17 ತಳಿಗಳನ್ನೊಳಗೊಂಡಿದೆ.

ವರಲಕ್ಷ್ಮಿ ಹತ್ತಿ ಪ್ರಪಂಚದಲ್ಲೇ ಮೊಟ್ಟಮೊದಲ ಇಂಟರ್ ಸ್ಪೆಸಿಫಿಕ್ ಹೈಬ್ರಿಡ್ ಹತ್ತಿ ತಳಿ. ಡಿ.ಸಿ.ಹೆಚ್ ಹೈಬ್ರಿಡ್ ಹತ್ತಿ ತಳಿ ಒಂದರಿಂದಲ್ಲೇ 1980ರಿಂದ ವರ್ಷಕ್ಕೆ ಸುಮಾರು 150 ಕೋಟಿ ರೂ ಹೆಚ್ಚಿನ ಆದಾಯ ತುಂಗ-ಭದ್ರ ಪ್ರಾಜೆಕ್ಟ ರೈತರಿಗೆ ಸಂದಾಯವಾಗುತ್ತಿದೆ.

ಗೋಧಿಯಲ್ಲಿ ಡಿ.ಡಬ್ಲ್ಯು.ಆರ್. 162 ತಳಿ ರಾಜ್ಯದ ಗೋಧಿ ಬೆಳೆಯುವ ಪ್ರದೇಶದ ಶೇಕಡ 80ರಷ್ಟನ್ನು ಆವರಿಸಿದೆ ಹಾಗು ದಕ್ಷಿಣ ಭಾರತದಲ್ಲಿ ಸುಮಾರು 2.5 ಲಕ್ಷ ಹೆಕ್ಟರೆಗೆ ಹಬ್ಬಿದೆ. ಇಂಡೋನೇಷಿಯದಂತಹ ಹೊರ ದೇಶಕ್ಕೂ ಹರಡಿದೆ. ಡೈಕಾಕಂ ಗಿಡ್ಡ ತಳಿ ಗೋಧಿ ರೈತರಿಗೆ ವರ್ಷಕ್ಕೆ ನೂರು ಕೋಟಿ ರೂ ಹೆಚ್ಚಿನ ಆದಾಯ ತರುತ್ತಿದೆ.

ಜೋಳದಲ್ಲಿ ಡಿ.ಎಸ್.ಹೆಚ್ 3 ಹೆಕ್ಟೆರಿಗೆ 50 ರಿಂದ 55 ಕ್ವಿಂಟಾಲ್ ಇಳುವರಿ ಕೊಡುವ ಶಕ್ತಿವುಳ್ಳದ್ದು. ರಬಿ ಜೋಳ ಎಂ 35–1 ಸ್ವಾದದಲ್ಲಿ ಮಿಕ್ಕೆಲ್ಲಾ ಜೋಳಗಳನ್ನು ಮೀರಿಸುವಂತಹದು.

ಬೇಳೆ ಕಾಳು ಉತ್ತರ ಕರ್ನಾಟಕದ ಗುಲ್ಬರ್ಗಾ, ಬೀದರ್, ರಾಯಚೂರ್, ಬಿಜಾಪುರ ಜಿಲ್ಲೆಗಳ ಜೀವನಾಧಾರ. ಜಿ.ಎಸ್–1 ಮತ್ತು ಮಾರುತಿ ತಳಿ ಶೇಕಡ 75 ಕ್ಕಿಂತ ಹೆಚ್ಚಿನ ಪ್ರದೇಶವನ್ನು ಅವರಿಸಿ ವರ್ಷಕ್ಕೆ ನೂರು ಕೋಟಿ ರೂ ಗಿಂತಲೂ ಅಧಿಕ ವರಮಾನ ತರುವಂತಾಗಿದೆ. ಕಡಲೆಯಲ್ಲಿ ಅಣ್ಣಿಗೆರೆ 1, ಐ.ಸಿ.ಸಿ.ವಿ –2, 10, ಬೆಳಗಾಂ, ಧಾರವಾಡ ಮತ್ತು ಬೀದರ್ ಜಿಲ್ಲೆಗಳಲ್ಲಿ 1 ಲಕ್ಷ ಹೆಕ್ಟರ್ ಗಿಂತ ಅಧಿಕ ಪ್ರದೇಶವನ್ನು ಅವರಿಸಿ ವರ್ಷಕ್ಕೆ ನೂರು ಕೋಟಿ ರೂ ಮೀರಿ ರೈತರಿಗೆ ಆದಾಯ ಹೆಚ್ಚಿಸಿದೆ.

ತಳಿ ಬಿಡುಗಡೆಯ ಜೊತೆಯಲ್ಲೇ ತಕ್ಕ ತಂತ್ರಜ್ಞಾನ ಸೇರಿದಾಗಲೇ ಪೂರ್ಣ ಪ್ರತಿಫಲ ದೊರೆಯುವುದು. ಬೇಸಾಯ ಕ್ರಮದಲ್ಲಿ ಬದಲಾವಣೆ, ಸಮಗ್ರ ಪೋಶಕಾಂಶ ನಿರ್ವಹಣೆ, ಸಮಗ್ರ ಕೀಟ ಹತೋಟಿ, ಮಣ್ಣು ಮತ್ತು ನೀರು ನಿರ್ವಹಣೆ ಗಳಿಂದ ವರ್ಷಕ್ಕೆ ಸುಮಾರು 250 ಕೋಟಿ ರೂ ನಷ್ಟು ರಾಸಾಯನಿಕ ಗೊಬ್ಬರದ ಬಳಕೆ ಕಡಿತಗೊಂಡಿದೆ ಹಾಗು ಕೀಟನಾಶಕಗಳ ಬಳಕೆಯಲ್ಲಿ ಅಗಾಧ ಪ್ರಮಾಣದಲ್ಲಿ ಇಳಿಮುಖವಾಗಿದೆ.

ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಅಭಿವೃದ್ಧಿಪಡಿಸಿದ ಎರೆಗೊಬ್ಬರ ಬಳಕೆ, ಗಿರಿರಾಜ ಕೋಳಿ ತಳಿ, ಯು.ಎ.ಎಸ್ ಕುರಿ, ಯಾರ್ಕ್‌ಸೈರ್ ಹಂದಿ, ಬಿತ್ತನೆ ಬೀಜ, ಸಂಸ್ಕರಿಸಿದ ಬೀಜ, ಕಸಿಮಾಡದ ಗಿಡ ಮುಂತಾದವುಕ್ಕೆ ರಾಜ್ಯದಲ್ಲಿ ಹೆಚ್ಚಿನ ಬೇಡಿಕೆ ಇದೆ.

ಕಳೆದ ಮೂರು ದಶಕಗಳಿಂದ ಕೃಷಿ ವಿಶ್ವ ವಿದ್ಯಾನಿಲಯದ ಹಲವಾರು ತಂತ್ರಜ್ಞಾನಗಳು, ತಳಿಗಳು, ತರಬೇತಿಗಳು ರಾಜ್ಯದ ಜನತೆಗೆ ದೊರಕುವಂತಾಗಿವೆ.

ವಿಸ್ತರಣಾ ವಿಭಾಗ:

ಕೃಷಿ ವಿಶ್ವ ವಿದ್ಯಾನಿಲಯದ ಮತ್ತೊಂದು ಬಹುಮುಖ ಕಾರ್ಯ ಚಟುವಟಿಕೆ ಎಂದರೆ ಸಂಶೋಧನೆಯ ಫಲವನ್ನು ಫಲಾನುಭವಿಗಳಿಗೆ (ರೈತರಿಗೆ) ತಲುಪಿಸುವುದು ಮತ್ತು ಅವರಿಂದ ಬರುವ ಸಮಸ್ಯೆಗಳನ್ನು ಸಂಶೋಧಕರ ಮುಂದೆ ಪರಿಹಾರಕ್ಕಾಗಿ ತರುವುದು. ಯು.ಎ.ಎಸ್. ವಿಸ್ತರಣಾ ಶಿಕ್ಷಣ ಘಟಕ ದೇಶದಲ್ಲೇ ವೈಶಿಷ್ಟ್ಯವಾದದ್ದು. ಈ ಘಟಕ ಎಲ್ಲಾ ವಿಷಯಗಳ ವಿಶೇಷ ತಜ್ಞರ ತಂಡವನ್ನು ಹೊಂದಿದ್ದು ಸುಮಾರು 10–20 ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಒಂದು ಘಟಕ ಕಾರ್ಯಾಚರಣೆ ನಡೆಸುವುದು. ಇಂತಂಹ ಘಟಕಗಳು ಬೆಂ. ಕೃ.ವಿ.ವಿ ದಲ್ಲಿ 4 ಹಾಗು ಧಾರವಾಡ ಕೃ.ವಿ.ವಿ ದಲ್ಲಿ 9 ಕಾರ್ಯ ನಿರ್ವಹಿಸುತ್ತಿವೆ. ಹೀಗೆಯೇ ಕೃಷಿ ವಿಜ್ಞಾನ ಕೇಂದ್ರಗಳು ಯು.ಎ.ಎಸ್ ಬೆಂಗಳೂರಿನಲ್ಲಿ 4 ಮತ್ತು ಧಾರವಾಡದಲ್ಲಿ 9 ಕಾರ್ಯಾಚರಣೆ ನಡೆಸುತ್ತಿವೆ. ಇವಲ್ಲದೇ ಕ್ಷೇತ್ರ ಮಾಹಿತಿ ಕೇಂದ್ರ, ಕೃಷಿ ಮಾಹಿತಿ ತಂತ್ರಜ್ಞಾನ ಕೇಂದ್ರ, ಸಿಬ್ಬಂದಿ ತರಬೇತಿ ಘಟಕ, ಬೇಕರಿ ತರಬೇತಿ ಘಟಕ, ರೈತರ ತರಬೇತಿ ಘಟಕ ಮುಂತಾದವುಗಳು ವಿಸ್ತರಣಾ ವಿಭಾಗದ ವ್ಯಾಪ್ತಿಗೆ ಒಳಪಟ್ಟಿವೆ. ಧಾರವಾಡ ಮತ್ತು ಬೆಂಗಳೂರು ಕೃ.ವಿ.ವಿಗಳು ಏರ್ಪಡಿಸುವ ಕೃಷಿ ಮೇಳಗಳು ವೈಶಿಷ್ಟವಾದವುಗಳು. ಸಾವಿರಾರು ಸಂಖ್ಯೆಯಲ್ಲಿ ರೈತರು ಭಾಗವಹಿಸಿ ಉಪಯೋಗ ಪಡೆಯುತ್ತಿದ್ದಾರೆ.

ಪ್ರತಿ ವರುಷ ತಜ್ಞರು ಮತ್ತು ಸಂಬಂಧಪಟ್ಟ ಇಲಾಖಾಸಿಬ್ಬಂದಿಯವರೊಡನೆ ಚರ್ಚಿಸಿ ಹೊಸ ಹೊಸ ತಂತ್ರಜ್ಞಾನ, ತಳಿಗಳ ಬಿಡುಗಡೆ ಮುಂತಾದವುಗಳನ್ನು ನವೀಕರಿಸುವ ಜವಾಬ್ದಾರಿ ಈ ವಿಭಾಗಕ್ಕೆ ಸೇರಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೋರಿಕೆ ಮೇರೆಗೆ ಹಲವಾರು ವಿಷಯಗಳಲ್ಲಿ ಸಿಬ್ಬಂದಿ ತರಬೇತಿಗಳನ್ನೂ ಕೂಡ ಯೋಜಿಸಲಾಗುತ್ತಿದೆ.

ಮುಂದೇನು...

ಕರ್ನಾಟಕ ಅಸ್ತಿತ್ವಕ್ಕೆ ಬಂದದ್ದು (1956) ಸ್ವತಂತ್ರ ಭಾರತ ಆಹಾರದ ಮುಗ್ಗಟ್ಟನ್ನು ಎದುರಿಸುತ್ತಿದ್ದಾಗ. ಹೊಸದಾಗಿ ಸೇರ್ಪಡೆಯಾದ ಉತ್ತರ ಕರ್ನಾಟಕದ ಹಲವಾರು ಭಾಗಗಳಿಂದ ಕರ್ನಾಟಕದ ಮಳೆ ಆಶ್ರಿತ ಬೇಸಾಯದ ಭಾಗ ಶೇಕಡ 67ಕ್ಕೆ ಏರಿತು. ರಾಜಾಸ್ಥಾನವನ್ನು ಬಿಟ್ಟರೆ ಕರ್ನಾಟಕವೇ ದೇಶದಲ್ಲಿ ಖುಷ್ಕಿ ಬೇಸಾಯಕ್ಕೆ ಎರಡನೇ ಸ್ಥಾನ ಪಡೆಯಿತು. ಆಗ ರಾಜ್ಯದ ನೀರಾವರಿ ಪ್ರದೇಶ ಕೇವಲ ಶೇಕಡಾ 7.35 ಇತ್ತು. ಅದೇ ನೆರೆ ರಾಜ್ಯ ತಮಿಳುನಾಡಿನಲ್ಲಿ ಶೇಕಡ 40 ರಷ್ಟು, ದೇಶದ ಸರಾಸರಿ ನಿರಾವರಿ ಶೇಕಡ 17 ರಷ್ಟು ಇತ್ತು. ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರ ಸಂಖ್ಯೆಯೂ ಕೂಡ (67%) ಕರ್ನಾಟಕದಲ್ಲಿ ಹೆಚ್ಚಾಗಿದ್ದು ಉತ್ಪತ್ತಿ ಮತ್ತು ಉತ್ಪಾದಕತೆ ಕನಿಷ್ಟ

ಪ್ರಮಾಣದಲ್ಲಿತ್ತು. ಈ ರೈತರು ಆಧುನಿಕ ಉಪಕರಣ ಹಾಗೂ ಪರಿಕರಗಳನ್ನು ಬಳಸುವ ಸ್ಥಿತಿಯಲ್ಲಿ ಇರಲಿಲ್ಲ. ಹಸಿರು ಕ್ರಾಂತಿಯ ಸೊಬಗು ಈ ರೈತರಿಗೆ ಮುಟ್ಟಲೇ ಇಲ್ಲ. ಬಡತನ ರೇಖೆಯಿಂದ ಕೆಳಗಿರುವವರ ಸಂಖ್ಯೆಯು ಕೂಡ ಈ ಗುಂಪಿನವರದೇ. ಸುವರ್ಣ ಕರ್ನಾಟಕ ಐಟಿ, ಬಿಟಿ ಪ್ರಾಬಲ್ಯದಿಂದ ಪ್ರಪಂಚದ ಭೂಪಟದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದೆ. ಆದರೆ ಶೇಕಡ 70ಕ್ಕೂ ಮೇಲ್ಪಟ್ಟಿರುವ ಗ್ರಾಮೀಣ ಜನಸಂಖ್ಯೆ ತಮ್ಮ ಜೀವನ ಸುಧಾರಿಸಬೇಕಾದರೆ ವ್ಯವಸಾಯವನ್ನೇ ಲಾಭದಾಯಕವಾಗಿ ಮಾಡಬೇಕು.

ಸಂಯುಕ್ತ ರಾಷ್ಟ್ರದ ಸಮೀಕ್ಷೆಯ ಪ್ರಕಾರ (**www.un.org/news** January 25 2006) ಭಾರತ ಮತ್ತು ಚೈನಾದಲ್ಲಿ ಸಾವಯವ ಕೃಷಿ ಗ್ರಾಮೀಣ ಬಡತನ ನೀಗಿಸುವ ಸಾಧನವೆಂದು ತಿಳಿದು ಬಂದಿದೆ. ಜೊತೆಗೆ ಸಾವಯವ ಕೃಷಿಯಿಂದ ಆರೋಗ್ಯ ಸುಧಾಹರಣೆಯೂ ಕಂಡುಬಂದಿದೆ.

ನ್ಯಾಷನಲ್ ಸ್ಯಾಂಪಲ್ ಸರ್ವೇ ಸಂಸ್ಥೆಯ ಪ್ರಕಾರ (February 2006) ಗ್ರಾಮೀಣ ಜನರ ತಿಂಗಳ ವರಮಾನದಲ್ಲಿ (ರೂ. 503) ಶೇಕಡ 55ರಷ್ಟು ಆಹಾರಕ್ಕಾಗಿ ಖರ್ಚಾಗುತ್ತಿದೆ. ವ್ಯವಸಾಯದಿಂದ ಬರುವ ರಾಷ್ಟ್ರೀಯ ವರಮಾನ (ಜಿ.ಡಿ.ಪಿ) ಶೇಕಡ 1.5 ರಷ್ಟಿದ್ದು ಜನಸಂಖ್ಯೆ ಶೇಕಡ 1.9 ರಂತೆ ಬೆಳೆಯುತ್ತಿದೆ. ವ್ಯವಸಾಯವನ್ನು ಔದ್ಯೋಗಿಕರಣ ಮಾಡುವ ದಿಶೆಯಲ್ಲಿ ಕೆಲವರು ಚಿಂತಿಸುತ್ತಿದ್ದಾರೆ. ಇದರಿಂದ ರೈತರಿಗೆ ಹೆಚ್ಚಿನ ಲಾಭವಾಗುವುದಿಲ್ಲ. ಏನೇ ಹೊಸ ತಂತ್ರಜ್ಞಾನ ಬಂದರೂ ರೈತನ ಬಾಗಿದ ಬೆನ್ನಿನಮೇಲೆ ಮತ್ತೂ ಭಾರ ಹೇರುವುದು. ಉದಾಹರಣೆಗೆ: ಬಿ.ಟಿ. ಹತ್ತಿಯಿಂದ ಇಳುವರಿ ಜಾಸ್ತಿಯಾಗುವುದೆಂದು ಒಂದು ಪ್ಯಾಕೇಟ್ (450ಗ್ರಾಂ) ಬಿಟಿ ಹತ್ತಿ ಬೀಜಕ್ಕೆ 1650 ರೂ ಕೊಡಬೇಕು. ಅದೇ ಸ್ಥಳೀಯ ಹೈಬ್ರಿಡ್ 350 ರೂಗಳಿಗೆ ದೊರೆಯುತ್ತದೆ. ಈಗೇಯೆ ಪ್ರತಿಯೊಂದು ಪರಿಕರಗಳು ದುಬಾರಿಯಾಗುತ್ತಲೇ ಇವೆ. ಆದರೆ ಅವನ ಬೆಳೆಗೆ ಮಾತ್ರ ಸರಿಯಾದ ಬೆಲೆ ಸಿಕ್ಕುವುದಿಲ್ಲ.

ರೈತನ ದುಡಿಮೆಗೆ ತಕ್ಕ ಬೆಲೆ ಸಿಗಬೇಕಾದರೆ ನಮ್ಮ ಬೇಸಾಯದಲ್ಲಿ ಮೂಲಭೂತ ಬದಲಾವಣೆಗಳು ಆಗಬೇಕು. ಪ್ರಪಂಚದಲ್ಲೇ ಭಾರತದಲ್ಲಿ ಬೇಸಾಯಕ್ಕೆ ಯೋಗ್ಯವಾದ ಭೂಮಿ ಅತಿ ಹೆಚ್ಚು, ಶೇಕಡ 51ರಷ್ಟು, ಅದೇ ಪ್ರಪಂಚದ ಸರಾಸರಿ ಶೇಕಡ 11. ನಮ್ಮ ಬಡತನ ನಮ್ಮಲ್ಲಿರುವ ಭೂಮಿಯ ಪೌಷ್ಠಿಕಾಂಶದ ಕೊರತೆಯಿಂದ. ಈ ಬಡತನವನ್ನು ನಿವಾರಣೆ ಮಾಡಬೇಕಾದರೆ ಹೊರಗಿನಿಂದ ತಂದ ತಂತ್ರಜ್ಞಾನ ಮತ್ತು ಪರಿಕರಗಳಿಂದ ಸಾಧ್ಯವಿಲ್ಲ. ದೇಶೀಯ ಸಂಪನ್ಮೂಲ ಮತ್ತು ತಂತ್ರಜ್ಞಾನದಿಂದ ಸಾಧ್ಯವೆಂಬುದನ್ನು ಸಾವಯವ ಕೃಷಿ ಸಾಬೀತುಪಡಿಸಿದೆ. ಇದು ರೈತರಿಗೆ ಲಾಭದಾಯಕವೂ ಹೌದು. ನಮ್ಮ ಕೃಷಿ ಸಂಶೋಧನೆ, ಅಧ್ಯಾಪನೆ ಮತ್ತು ವಿಸ್ತರಣೆ ಈ ದಿಕ್ಕಿನಲ್ಲಿ ಬದಲಾವಣೆಯಾಗಬೇಕು.

ವಿಷಯಗಳ ಮೂಲ ಕೃತಿಗಳು:

1. Mysore Act No. 22 of 1963 "the University of Agriculture Sciences Act 1963 – Govt of Mysore Law Department, Govt Press 1964.
2. Karnataka Act No. 14 of 1986: Karnataka Gezette Extraordinary on 2nd day of May 1986.
3. ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಿಗಳ ವಿಶ್ವ ವಿದ್ಯಾನಿಲಯ ಅಧಿನಿಯಮ 2004: ಕರ್ನಾಟಕ ರಾಜ್ಯಪತ್ರ ನಂ.262 ಫೆಬ್ರವರಿ 2004.
4. Self study Report for Accreditation 2000-2001 UAS, Bangalore October 2001.
5. Golden Memories 1947-1997. Golden Jubilee Souvenir College of Agriculture Dharwad-580005.
6. Gold Track, 1946-1996: Golden Souvenir Agriculture College, Hebbal, Bangalore.
7. Annual Reports of UAS Bangalore and Dharwad 2004.
8. Draft Report of the State Level Agriculture Research Review Committee Govt. of Karnataka 2004.
9. ಕರ್ನಾಟಕ ಕೃಷಿ ಲೋಕದ ಹಿರಿಯರು:
   ಡಿ.ಎಸ್. ಮುರಿಗಪ್ಪ ಶ್ರೇಷ್ಠಿ in "Karnataka's Agriculture on the March 1913-1988;"- Dept. of Agril. Govt. of Karnataka Page 199-206.